ಶಂಕರನಿಗೆ ರಾಮು ಮತ್ತು ಶ್ಯಾಮು ಎಂಬ ಇಬ್ಬರು ಮಕ್ಕಳು. ಈ ಇಬ್ಬರು ಮಕ್ಕಳಿಗೂ ಎಲ್ಲಾ ವಿಷಯಗಳಲ್ಲೂ ಅಜಗಜಾಂತರ ವ್ಯತ್ಯಾಸವಿತ್ತು. ರಾಮು ತುಂಬಾ ಬುದ್ಧಿವಂತ. ಇವನೊಬ್ಬ ಪುಸ್ತಕದ ಹುಳುವಾಗಿದ್ದ. ಓದುವುದನ್ನು ಬಿಟ್ಟರೆ ಬೇರೆ ಯಾವ ಚಟುವಟಿಕೆಯಲ್ಲೂ ಇವನು ಭಾಗವಹಿಸುತ್ತಿರಲಿಲ್ಲ. ಆದರೂ ಎಲ್ಲರೂ ಅವನನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಆದರೆ ಶ್ಯಾಮುವಿಗೆ ಶಾಲೆ, ಓದು ಇವುಗಳಲ್ಲಿ ಆಸಕ್ತಿ ಇರಲಿಲ್ಲ. ಆದರೂ ಬೇರೆಲ್ಲಾ ಕೆಲಸ–ಕಾರ್ಯಗಳನ್ನೂ, ಶಾಲೆಯ ಇತರ ಚಟುವಟಿಕೆಗಳನ್ನು ತುಂಬಾ ಅಚ್ಚುಕಟ್ಟಾಗಿ ಮಾಡುತ್ತಿದ್ದ. ಕಲಿಕೆ ಒಂದನ್ನು ಬಿಟ್ಟರೆ ಶಾಲೆಯ ಇತರ ಚಟುವಟುಕೆಗಳಲ್ಲಿ ಇವನೇ ಮುಂದಿರುತ್ತಿದ್ದ. ಇದರಿಂದ ಕಂಗಾಲಾಗುತ್ತಿದ್ದ ತಂದೆ–ತಾಯಿಗಳು ಬುದ್ಧಿಮಾತು ಹೇಳುತ್ತಿದ್ದರು. ಕೂಡಲೇ ಅವನು ಕಂಬಿಕೀಳುತ್ತಿದ್ದ. ಇವನಿಗೆ ಹೇಳಿದ ಬುದ್ಧಿಮಾತು ನೀರಿನ ಮೇಲೆ ಹೋಮ ಮಾಡಿದಂತಾಗುತ್ತಿತ್ತು. ತಮ್ಮ ಮಗನ ಜೀವನ ಎಲ್ಲಿ ಅಡವಿ ಪಾಲಾಗುವುದೋ ಎಂದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ ಮಗನ ಮೇಲೆ ಬಲಪ್ರದರ್ಶನ ಮಾಡುತ್ತಿದ್ದರು. ಇದಕ್ಕಾಗಿ ಶ್ಯಾಮು ಎದೆಗುಂದಲಿಲ್ಲ. ತನ್ನ ಮೇಲೆ ತನ್ನಗಿದ್ದ ವಿಶ್ವಾಸ ಹಿಂಗಿ ಹೋಗಲಿಲ್ಲ. ಆದರೂ ಪರೀಕ್ಷೆ ಬಂದಾಗ ಇವನ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಗುತ್ತಿತ್ತು. ಬರಬರುತ್ತಾ ಕಷ್ಟಪಟ್ಟು ಓದಲು ಪ್ರಾರಂಭಿಸಿದ. ರಾಮು ಕೂಡ ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಲು ನಿರ್ಧರಿಸಿದ. ಇಬ್ಬರೂ ತಮ್ಮ ಬದುಕನ್ನು ತಾವೇ ಕಟ್ಟಿಕೊಂಡು ತಂದೆ ತಾಯಿಗಳಿಗೆ ಆಸರೆಯಾಗಿ ನಿಂತರು. ಮಕ್ಕಳ ಏಳಿಗೆಯನ್ನು ಕಂಡು ಹಿರಿಯರು ತುಂಬಾ ಸಂತೋಷಪಟ್ಟರು.

@KTBS NOT TO BE REPUBLISHED

| | |
|---|---|
| 1. | 6. |
| 2. | 7. |
| 3. | 8. |
| 4. | 9. |
| 5. | 10. |

**ಆ. ಇದೇ ರೀತಿ ಇನ್ನಷ್ಟು ನುಡಿಗಟ್ಟುಗಳನ್ನು ಸಂಗ್ರಹಿಸಿ ಒಂದು ಘಟನೆ ಮೂಲಕ ಅರ್ಥೈಸಿ.**

**ಇ. ನನ್ನನ್ನು ತಿಳಿಯಿರಿ.**

1. ಅಜಗಜಾಂತರ – ತುಂಬಾ ಅಂತರ (ಆಡು ಮತ್ತು ಆನೆಗಿರುವಷ್ಟು)
2. ಕಂಗಾಲಾಗು – ಏನೂ ತೋಚದಾಗು, ದಯನೀಯ ಸ್ಥಿತಿ ತಲುಪು.
3. ಅಟ್ಟಕ್ಕೇರಿಸು – ಹೊಗಳಿ ಹೊಗಳಿ ಉಬ್ಬಿಸು.
4. ಪುಸ್ತಕದ ಹುಳು – ಸದಾಕಾಲ ಓದುವವ
5. ನೀರಿನ ಮೇಲೆ ಹೋಮ – ವ್ಯರ್ಥ, ನಿರರ್ಥಕ, ದೊರಕದೆ ಹೋಗುವುದು.
6. ಅಡವಿ ಪಾಲಾಗು – ನಾಶವಾಗು.
7. ಕಂಬಿಕೀಳು – ಓಡಿಹೋಗು.
8. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ – ಸಣ್ಣವರ ಮೇಲೆ ಬಲ ಪ್ರದರ್ಶನ.
9. ಅವಲಕ್ಕಿ ಕುಟ್ಟು – ಎದೆ ಡವ ಡವ ಎಂದು ಹೊಡೆದುಕೊಳ್ಳು.
10. ಹಿಂಗಿಹೋಗು – ಒಣಗು, ಸಂಪೂರ್ಣ ಹಾಳಾಗು.
11. ಎದೆಗುಂದು – ಧೈರ್ಯ ಕಳೆದುಕೊಳ್ಳು.

**ನಿಮಗಾಗಿ :** ಇವು ವಿಶೇಷ ಅರ್ಥವುಳ್ಳ ಮತ್ತು ಒಳಾರ್ಥವುಳ್ಳ ಪದಪುಂಜಗಳು ಇವುಗಳನ್ನು **"ನುಡಿಗಟ್ಟುಗಳು"** ಎನ್ನುವರು.

NOT TO BE REPUBLISHED @KTBS

**ಈ. ಇವುಗಳನ್ನು ಗಮನಿಸುತ್ತ ಬರೆಯಿರಿ.**

1. ಕಿಡಿಕಾರು (ಸಿಟ್ಟಿಗೇಳು) : ಕಳ್ಳನನ್ನು ಕಾಣುತ್ತಲೇ ಜನರು ಕಿಡಿಕಾರಿದರು.

2. ಟೊಂಕ ಕಟ್ಟಿ ನಿಲ್ಲು : (ಬದ್ಧನಾಗಿರು) : ದೇಶ ಸೇವೆಗೆ ಎಲ್ಲರೂ ಟೊಂಕಕಟ್ಟಿ ನಿಲ್ಲೋಣ.

3. ತಲೆದೂಗು (ಒಪ್ಪು) : ಸಂಗೀತಗಾರನ ಹಾಡಿನ ವೈಖರಿಗೆ ಎಲ್ಲರೂ ತಲೆದೂಗಿದರು.

4. ಮುಖ ಅರಳಿತು (ಸಂತೋಷವಾಗು) : ತಾಯಿಯನ್ನು ಕಂಡ ಕೂಡಲೇ ಮಗುವಿನ ಮುಖ ಅರಳಿತು.

5. ಮೇಲುಗೈ (ಗೆಲುವಿನ ಲಕ್ಷಣ) : ಪಾಠ ಪ್ರವಚನಗಳಲ್ಲದೆ ಆಟೋಟಗಳಲ್ಲಿಯೂ ಬಾಲಕಿಯರು ಮೇಲುಗೈ ಸಾಧಿಸಿದ್ದರು.

6. ಬೆಣ್ಣೆ ಹಚ್ಚು (ನಯವಿನಯದಿಂದ ಮಾತಾಡು): ವಿಶ್ವಾಸನಿಗೆ ಬೆಣ್ಣೆ ಹಚ್ಚಿದರೆ ಯಾವ ಕೆಲಸವನ್ನಾದರೂ ಮಾಡುತ್ತಾನೆ.

7. ತಲೆಗೆ ಹಚ್ಚಿಕೊಳ್ಳು (ಬಹುವಾಗಿ ಯೋಚಿಸು) : ಸಣ್ಣಪುಟ್ಟ ವಿಷಯಗಳನ್ನು ತಲೆಗೆ ಹಚ್ಚಿಕೊಂಡು ಕೊರಗಬಾರದು.

@KTBS NOT TO BE REPUBLISHED

8. ಮುಖಕ್ಕೆ ಮಸಿ ಹಚ್ಚು (ಕಳಂಕಿತರು) : ಮಕ್ಕಳು ಕೆಟ್ಟದಾರಿಗಿಳಿದರೆ ತಂದೆ ತಾಯಿಯ ಮುಖಕ್ಕೆ ಮಸಿ ಹಚ್ಚಿದಂತೆ ಆಗುವುದು.

9. ಅಟ್ಟಕ್ಕೇರಿಸು (ಹೊಗಳು) : ಶಾಂತ ಬುದ್ಧಿವಂತಳೆಂದು ಎಲ್ಲರೂ ಅವಳನ್ನು ಅಟ್ಟಕ್ಕೇರಿಸಿ ಬಿಟ್ಟಿದ್ದಾರೆ.

10. ದಡ ಕಾಣಿಸು (ಪಾರು ಮಾಡಿಸು): ಈಗ ಬಂದ ಕಷ್ಟದಿಂದ ದೇವರೇ ದಡ ಕಾಣಿಸಬೇಕು.

@KTBS NOT TO BE REPUBLISHED

**ಉ. ವಾಕ್ಯ ಮಾಡಿ ಬರೆಯಿರಿ.**

1. ಎತ್ತಿದ ಕೈ (ಪ್ರವೀಣ) :

2. ಮೈ ಬಗ್ಗಿಸು (ಶ್ರಮ ಪಡು) :

3. ನೀರಿಗೆ ಹಾಕು (ವ್ಯರ್ಥ ಮಾಡು) :

4. ಬಲೆಗೆ ಬೀಳು (ವಶಕ್ಕೆ ಸಿಕ್ಕು) :

5. ಮಂಗಮಾಯ (ಇದ್ದಕ್ಕಿದಂತೆ ಕಾಣದಾಗು) :

**ನಿಮಗಾಗಿ :** ಇವು ವಿಶೇಷ ಅರ್ಥವನ್ನು ನೀಡುವ ಪದಗಳು. ಅಂದರೆ **"ನುಡಿಗಟ್ಟುಗಳು"**.

# 11. ಅಭ್ಯಾಸ

## ಅ. ನಿಮಗೆಷ್ಟು ತಿಳಿದಿದೆ ? ..... ಬರೆಯಲು ಪ್ರಯತ್ನಿಸಿ.

ತಾಯಿಗಿಂತ ಬಂಧುವಿಲ್ಲ; ಬಾಯಿ ಮೊಸರು; ಮರವಾಗಿ ಬಗ್ಗೀತೇ?; ಇಲಿಗೆ ಪ್ರಾಣ ಸಂಕಟ; ಚಿಂತಿಸಿ ಫಲವೇನು?; ಅರಸಾಗಿ ಉಣ್ಣು; ಭಾಗ್ಯ ; ಕಾಲು ಚಾಚು; ಕೈಲಾಸ; ಆನೆ ಕೊಟ್ಟರೂ ಬಾರದು; ತೂರಿಕೋ; ದೊಣ್ಣೆಗೆ ಒಂದು ನಿಮಿಷ; ಮದ್ದಲ್ಲ; ತೂತು ಒಲೆಕೆಡಿಸಿತು; ತುಳುಕುವುದಿಲ್ಲ, ದೊಡ್ಡಪ್ಪ; ಮೊಳಕೆಯಲ್ಲಿ; ಗತಿಗೇಡು; ಮಾರಾಯ; ಜಗಳವಿಲ್ಲ; ಬಲವಿದೆ.

ಮಾದರಿ : ಉಪ್ಪಿಗಿಂತ ರುಚಿ ಇಲ್ಲ. ತಾಯಿಗಿಂತ ಬಂಧುವಿಲ್ಲ

| | | | |
|---|---|---|---|
| 1. | ಕೈ ಕೆಸರಾದರೆ | : | ______ |
| 2. | ಹಾಸಿಗೆ ಇದ್ದಷ್ಟು | : | ______ |
| 3. | ಗಾಳಿ ಬಂದಂತೆ | : | ______ |
| 4. | ಕಾಯಕವೇ | : | ______ |
| 5. | ಮಾತು ಮನೆ ಕೆಡಿಸಿತು | : | ______ |
| 6. | ಬೆಳೆವ ಸಿರಿ | : | ______ |
| 7. | ಅತಿ ಆಸೆ | : | ______ |
| 8. | ಆರೋಗ್ಯವೇ | : | ______ |
| 9. | ದುಡ್ಡೇ | : | ______ |
| 10. | ಬೆಕ್ಕಿಗೆ ಆಟ | : | ______ |
| 11. | ಒಗ್ಗಟ್ಟಿನಲ್ಲಿ | : | ______ |
| 12. | ಕುಂಬಾರನಿಗೆ ಒಂದು ವರುಷ | : | ______ |
| 13. | ತುಂಬಿದ ಕೊಡ | : | ______ |
| 14. | ಮಿಂಚಿ ಹೋದ ಕಾರ್ಯಕ್ಕೆ | : | ______ |
| 15. | ಗಿಡವಾಗಿ ಬಗ್ಗದ್ದು | : | ______ |
| 16. | ಆಳಾಗಿ ದುಡಿ | : | ______ |
| 17. | ಹಿತ್ತಲ ಗಿಡ | : | ______ |
| 18. | ಮಾಡಿದ್ದುಣ್ಣೋ | : | ______ |
| 19. | ಮಾತು ಬಲ್ಲವನಿಗೆ | : | ______ |
| 20. | ಅಡಿಕೆಗೆ ಹೋದ ಮಾನ | : | ______ |

@KTBS NOT TO BE REPUBLISHED

## ಆ. ನನ್ನನ್ನು ಬಳಸಿಕೊಂಡು ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಹಿತ್ತಲಗಿಡ ಮದ್ದಲ್ಲ. 2. ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ. 3. ಕೈ ಕೆಸರಾದರೆ ಬಾಯಿ ಮೊಸರು. 4. ಹಾಸಿಗೆ ಇದ್ದಷ್ಟು ಕಾಲು ಚಾಚು. 5. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ. 6. ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ.

1. ಸಂತೆಯ ಗಲಾಟೆಯಲ್ಲೂ ಚೆನ್ನಾಗಿ ನಿದ್ರಿಸಬಲ್ಲ. ಇದಕ್ಕೆ ಹೊಂದುವ ಗಾದೆ ಮಾತು ______________________ .
2. ವರ್ಷಗಟ್ಟಲೆ ಬೆಳೆಸಿದ ಮರವನ್ನು ಕೆಲವೇ ಗಂಟೆಗಳಲ್ಲಿ ಉರುಳಿಸಬಹುದು. ಇದಕ್ಕೆ ಗಾದೆ ಮಾತಿನಲ್ಲಿ ______________________ ಎಂದೂ ಹೇಳಬಹುದು.
3. ನಮ್ಮ ಸಂಪಾದನೆಗಿಂತ ಕಡಿಮೆ ಖರ್ಚು ಮಾಡಿದರೆ ತೃಪ್ತಿಯಿಂದ ಬದುಕಬಹುದು ಇದಕ್ಕೆ ಗಾದೆ ಮಾತಿನಲ್ಲಿ ______________________ ಎಂಬ ಅರ್ಥವಿದೆ.
4. ನಮಗೆ ಉಪಕಾರ ಮಾಡುವ ವ್ಯಕ್ತಿ ನಮ್ಮ ಮನೆಯಲ್ಲಿಯೇ ಇದ್ದರೂ ಅವರನ್ನು ಅಲಕ್ಷ್ಯ ಮಾಡಿ, ದೂರದ ವ್ಯಕ್ತಿಯನ್ನು ಹುಡುಕಿಕೊಂಡು ಹೋಗುವವರನ್ನು ನೋಡಿದ ಒಬ್ಬ ಹಿರಿಯ ವ್ಯಕ್ತಿ ಈ ಮಾತನ್ನು ಹೇಳಿದ್ದಾರೆ. ______________________
5. ಜೀವನದಲ್ಲಿ ಪ್ರತಿನಿತ್ಯ ತಮ್ಮ ಸ್ವಾರ್ಥಕ್ಕಾಗಿ ಒಬ್ಬರು ಮತ್ತೊಬ್ಬರನ್ನು ಸತಾಯಿಸುತ್ತಿರುವುದನ್ನು ಕಾಣುತ್ತೇನೆ. ಇಂತವರಿಗಾಗಿಯೇ ಹುಟ್ಟಿಕೊಂಡ ಗಾದೆ ಮಾತಿದು ______________________.
6. ಕಷ್ಟಪಟ್ಟು ದುಡಿದರೆ ಸುಖವಾಗಿ ಊಟ ಮಾಡಬಹುದು. ದುಡಿತವೇ ದುಡ್ಡಿನ ತಾಯಿ, ಇದಕ್ಕಾಗಿಯೇ ಈ ಗಾದೆ ಮಾತು ಹುಟ್ಟಿದೆ. ______________________

©KTBS NOT TO BE REPUBLISHED

# 12. ಅಭ್ಯಾಸ

## ಅ. ನಾನ್ಯಾರೆಂದು ಹೇಳಿ.

ಪುಸ್ತಕ, ಮೊಟ್ಟೆ, ನೀರು, ಕಪ್ಪೆ, ನಿಂಬೆಹಣ್ಣು, ಮೂಗುತಿ, ಬುಗರಿ, ನೆರಳು, ಹುಬ್ಬು, ಅಂಗೈ.

1. ಸುತ್ತಮುತ್ತ ಸುಣ್ಣದ ಗೋಡೆ;
   ಎತ್ತ ನೋಡಿದರೂ ಬಾಗಿಲಿಲ್ಲ ______
2. ಐದು ಮನೆಗೆ ಒಂದೇ ಅಂಗಳ. ______
3. ಮುಳ್ಳು ಗಿಡದಲ್ಲಿ ಬಂಗಾರದ ಮೊಟ್ಟೆ. ______
4. ಕೂಗಿದರೆ ರಾವಣ; ಹಾರಿದರೆ ಹನುಮಂತ;
   ಕೂತರೆ ಮುನಿ. ______
5. ಗಿರಗಿರ ತಿರುಗುತ್ತೆ; ಸುಸ್ತಾಗಿ ಬೀಳುತ್ತೆ. ______

6. ಚಿಕ್ಕ ಮನೆಗೆ ಚಿನ್ನದ ಬೀಗ.

7. ಚಳಿಯಲ್ಲಿ ಕಲ್ಲಾಗಿ ನಿಂತೇನು;
ಬಿಸಿಲಲ್ಲಿ ಕಲ್ಕರಗಿ ಹರಿದೇನು.

8. ಮುಚ್ಚಿದರೆ ಒಂದು; ಬಿಚ್ಚಿದರೆ ಸಾವಿರ.

9. ಏರಿ ಮೇಲೆ ಸಾಲುಮರ.

10. ಬರ್‍ತಾ ಇಳೀತಾನೆ; ಹೋಗ್ತಾ ಏರ್‍ತಾನೆ.

**ಆ. ನಿಮಗೆ ತಿಳಿದಿರುವ ಇತರೆ ಒಗಟುಗಳನ್ನು ಬರೆಯಲು ಪ್ರಯತ್ನಿಸಿ.**

1.
2.
3.
4.
5.
6.
7.

@KTBS NOT TO BE REPUBLISHED

**ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ**

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ವಿರುದ್ಧ ಪದಗಳನ್ನು ಗುರುತಿಸುವೆ. | | | |
| 2 | ವಾಕ್ಯಗಳಲ್ಲಿ/ಹೇಳಿಕೆಗಳಲ್ಲಿ ಬಳಸುವ ನುಡಿಗಟ್ಟುಗಳನ್ನು ಅರ್ಥೈಸುವೆ. | | | |
| 3 | ಪದಗಳನ್ನು ಸೂಕ್ತವಾಗಿ ವಾಕ್ಯಗಳಲ್ಲಿ ಬರೆಯಲು ಬಳಸುವೆ. | | | |
| 4 | ಗಾದೆ ಮಾತುಗಳ ಅರ್ಥವನ್ನು ಗ್ರಹಿಸುವೆ ಮತ್ತು ಪೂರ್ಣಗೊಳಿಸುವೆ. | | | |
| 5 | ಒಗಟುಗಳನ್ನು ಬಿಡಿಸುವೆ ಮತ್ತು ಸಂದರ್ಭೋಚಿತವಾಗಿ ಬಳಸುವೆ. | | | |

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |

✦✦✦

# 13. ಕಿರು ಪರೀಕ್ಷೆ–3

## ಅ. ಸಮಾನಾರ್ಥಕ ಪದಗಳನ್ನು ಬರೆಯಿರಿ.

| | | | |
|---|---|---|---|
| 1. ಆಕಾಶ → : | | | |
| 2. ಕಣ್ಣು → : | | | |
| 3. ಇರುಳು → : | | | |
| 4. ಕಾಡು → : | | | |

## ಆ. ನಾನಾರ್ಥಕ ಪದಗಳನ್ನು ಬರೆಯಿರಿ.

| | | |
|---|---|---|
| 1. ಅರಸು = | | |
| 2. ಗಡಿ = | | |
| 3. ಅಂಬರ = | | |
| 4. ಬಳಿ = | | |

@KTBS NOT TO BE REPUBLISHED

## ಇ. ಈ ಪದಗಳನ್ನು ರೂಢನಾಮ, ಅನ್ವರ್ಥನಾಮ, ಅಂಕಿತನಾಮಗಳಾಗಿ ವಿಂಗಡಿಸಿ.

{ ತಂದೆ, ದೇಶ, ವರುಣ, ಪುಸ್ತಕ, ಮಡಿಕೇರಿ, ಮೂಗ,
ನದಿ, ಕಿವುಡ, ವಕೀಲ, ಭಾರತ, ಕುಂಟ, ಹೆಬ್ಬಳಲು,
ಕಮಲ, ಬೆಟ್ಟ, ಮೇಜು, ನಾಗಿಣಿ, ಕುಂಬಾರ, ಮಂಡ್ಯ }

| | |
|---|---|
| **ರೂಢನಾಮ** : | |
| **ಅನ್ವರ್ಥನಾಮ** : | |
| **ಅಂಕಿತನಾಮ** : | |

## ಈ. ಕೊಟ್ಟಿರುವ ಪದಗಳನ್ನು ಉಪಯೋಗಿಸಿ ಬಿಟ್ಟ ಸ್ಥಳಗಳನ್ನು ತುಂಬಿರಿ.

[ ಹೊರಗೆ, ಭಾರ, ಮುಂದೆ, ಲಾಭ ]

1. ಚೈತ್ರಳು ಬಸ್ಸಿನೊಳಗೆ ಹಿಂದೆ ಕುಳಿತಿದ್ದರೆ, ರಶ್ಮಿಯು ಬಸ್ಸಿನೊಳಗೆ ____________ ಕುಳಿತಿದ್ದಳು.
2. ವೇಣುವಿನ ಕೈ ಚೀಲ ತುಂಬಾ ಹಗುರವಾಗಿತ್ತು. ಆದರೆ ವಿಶ್ವಾಸನ ಕೈ ಚೀಲ ತುಂಬ ____________ ಆಗಿತ್ತು.

3. ಅಜ್ಜಿಯು ಮನೆ ಒಳಗೆ ಕುಳಿತು ಪತ್ರಿಕೆ ಓದುತ್ತಿದ್ದಳು. ಆದರೆ ಅಜ್ಜನು ಮನೆಯ__________ ಕುಳಿತು ಪತ್ರಿಕೆ ಓದುತ್ತಿದ್ದನು.

4. ಹೋದ ವರ್ಷ ಶಂಕರನಿಗೆ ವ್ಯಾಪಾರದಲ್ಲಿ ನಷ್ಟ ಉಂಟಾಯಿತು. ಆದರೆ ಈ ವರ್ಷ ಅವನಿಗೆ ______ ಆಗಿರುತ್ತದೆ.

## ಉ. ಕೆಳಗಿನ ನುಡಿಗಟ್ಟುಗಳನ್ನು ಬಳಸಿ ವಾಕ್ಯ ರಚಿಸಿ.

| |
|---|
| 1. ಮುಖ ಅರಳಿತು : |
| |
| 2. ಬೆಣ್ಣೆ ಹಚ್ಚು : |
| |
| 3. ತಲೆಗೆ ಹಚ್ಚಿಕೊಳ್ಳು : |
| |

@KTBS NOT TO BE REPUBLISHED

## ಊ. ಕೆಳಗಿನ ಗಾದೆಗಳನ್ನು ಪೂರ್ಣಗೊಳಿಸಿ.

| |
|---|
| 1. ಕುಂಬಾರನಿಗೆ ವರುಷ : |
| 2. ಅಡಿಕೆಗೆ ಹೋದ ಮಾನ : |
| 3. ಹಾಸಿಗೆ ಇದ್ದಷ್ಟು : |
| 4. ತುಂಬಿದ ಕೊಡ : |

## ಋ. ನಿಮಗೆ ತಿಳಿದಿರುವ ಐದು ಒಗಟುಗಳನ್ನು ಬರೆಯಿರಿ.

| |
|---|
| 1. |
| 2. |
| 3. |
| 4. |
| 5. |

ಎ. ಕೆಳಗಿನ ಚಿತ್ರಗಳಲ್ಲಿರುವ ಸನ್ನಿವೇಶ ಗಮನಿಸುತ್ತಾ ನಿಮಗೆ ತಿಳಿದಿದ್ದನ್ನು ಬರೆಯಿರಿ.

**1.**



@KTBS NOT TO BE REPUBLISHED

2.



@KTBS
NOT TO BE REPUBLISHED

| | | | | | | | |
|---|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ | |

# 14. ಅಭ್ಯಾಸ

**ಅ. ಮಾದರಿಯಂತೆ ಹೇಳುತ್ತಾ ಬರೆಯಿರಿ ಮತ್ತು ಸಂಧಿಯ ಹೆಸರನ್ನು ತಿಳಿಸಿ.**

1. **ಮಾದರಿ:** ಅವನ + ಅಲ್ಲಿ = ಅವನಲ್ಲಿ – ಲೋಪಸಂಧಿ
   - ಆ. ಮಾಡು + ಇಸು =
   - ಇ. ಅಲ್ಲಿ + ಅಲ್ಲಿ =
   - ಈ. ಮಾತು+ ಇಲ್ಲ =
   - ಉ. ನಾವು + ಎಲ್ಲ =

2. ಅ. ಆರಂಭ + ಆಗು =
   - ಆ. ಗುರು + ಇಗೆ =
   - ಇ. ಹುಲಿ + ಇಂದ =
   - ಈ. ಮನೆ + ಅನ್ನು =
   - ಉ. ನದಿ + ಅಲ್ಲಿ =

3. ಅ. ಬೆಟ್ಟ + ತಾವರೆ =
   - ಆ. ಕಣ್ + ಪನಿ =
   - ಇ. ಮಳೆ + ಕಾಲ =
   - ಈ. ಹೊಸ + ಕನ್ನಡ =
   - ಉ. ಮೈ + ತೊಳೆ =

@KTBS NOT TO BE REPUBLISHED

# ಹೆಚ್ಚಿನ ಮಾಹಿತಿಗಾಗಿ




**ಕನ್ನಡ ಸಂಧಿಗಳು :**

1. ಆದೇಶ ಸಂಧಿ
2. ಆಗಮ ಸಂಧಿ
3. ಲೋಪಸಂಧಿ



ಆ. ಮಾದರಿಯಂತೆ ಹೇಳುತ್ತಾ ಪದಗಳನ್ನು ಕೂಡಿಸಿ ಬರೆದು ಸಂಧಿಯನ್ನು ಹೆಸರಿಸಿ.

| | | | |
|---|---|---|---|
| 1. **ಮಾದರಿ:** | | ಗಿರಿ + ಈಶ = | ಗಿರೀಶ – ಸವರ್ಣದೀರ್ಘ ಸಂಧಿ |
| | ಆ. | ರವಿ + ಇಂದ್ರ = | |
| | ಇ. | ಸುರ + ಅಸುರ = | |
| | ಈ. | ಗುರು + ಉಪದೇಶ = | |
| 2. | ಅ. | ಮಹ + ಋಷಿ = | |
| | ಆ. | ಚಂದ್ರ + ಉದಯ = | |
| | ಇ. | ಮಹ + ಈಶ್ವರ = | |
| | ಈ. | ಸುರ + ಇಂದ್ರ = | |
| 3. | ಅ. | ಶಿವ + ಐಕ್ಯ = | |
| | ಆ. | ಏಕ + ಏಕ = | |
| | ಇ. | ವನ + ಔಷಧ = | |
| | ಈ. | ಅಷ್ಟ + ಐಶ್ವರ್ಯ = | |
| 4. | ಅ. | ಅತಿ + ಅಂತ = | |
| | ಆ. | ಅತಿ + ಉತ್ತಮ = | |
| | ಇ. | ಜಾತಿ + ಅತೀತ = | |
| | ಈ. | ಇತಿ + ಆದಿ = | |

@KTBS
NOT TO BE REPUBLISHED

# ಹೆಚ್ಚಿನ ಮಾಹಿತಿಗಾಗಿ






**ಸಂಸ್ಕೃತ ಸಂಧಿಗಳು :**

1. ಸವರ್ಣ ದೀರ್ಘ ಸಂಧಿ
2. ಗುಣ ಸಂಧಿ
3. ಯಣ್ ಸಂಧಿ
4. ವೃದ್ಧಿ ಸಂಧಿ

**ಇ. ಮಾದರಿಯಂತೆ ಹೇಳುತ್ತಾ ಬರೆಯಿರಿ ಮತ್ತು ಸಂಧಿಯ ಹೆಸರನ್ನು ತಿಳಿಸಿ.**

1. **ಮಾದರಿ:** ವಾಕ್ + ಈಶ = ವಾಗೀಶ – ಜಸ್ತ್ವ ಸಂಧಿ

ಆ. ದಿಕ್ + ಅಂತ =

ಇ. ವಾಕ್ + ದೇವಿ =

ಈ. ಅಜ್ + ಅಂತ =

ಉ. ಷಟ್ + ಆನನ =

ಊ. ಚಿತ್ + ಆನಂದ =

ಋ. ಬೃಹತ್ + ಆಕಾರ =

ಎ. ಅಪ್ + ಧಿ =

2. ಅ. ಮನಸ್ + ಶುದ್ಧಿ =

ಆ. ಸತ್ + ಚಿತ್ರ =

ಇ. ತದ್ + ಜಾತಿ =

ಈ. ಜಗತ್ + ಜನನಿ =

ಉ. ಶರತ್ + ಚಂದ್ರ =

3. ಅ. ವಾಕ್ + ಮಯ =

ಆ. ಷಟ್ + ಮುಖ =

ಇ. ಸತ್ + ಮಾನ =

ಈ. ಚಿತ್ + ಮಯ =

ಉ. ಉತ್ + ಮಾದ = ಉನ್ಮಾದ

@KTBS NOT TO BE REPUBLISHED

# ಹೆಚ್ಚಿನ ಮಾಹಿತಿಗಾಗಿ




©KTBS
NOT TO BE REPUBLISHED

**ವ್ಯಂಜನ ಸಂಧಿಗಳು :**

1. ಶ್ಚುತ್ವ ಸಂಧಿ
2. ಜಸ್ತ್ವ ಸಂಧಿ
3. ಅನುನಾಸಿಕ ಸಂಧಿ



## ಈ. ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ.

| | | | | |
|---|---|---|---|---|
| ಮಾದರಿ : ಕಾರ್ಯಾಲಯ | = | ಕಾರ್ಯ + ಆಲಯ | = | ಸವರ್ಣದೀರ್ಘ ಸಂಧಿ |
| 1. ಗಿರೀಶ | = | + | = | |
| 2. ಸುರೇಂದ್ರ | = | + | = | |
| 3. ಅತ್ಯಂತ | = | + | = | |
| 4. ಏಕೈಕ | = | + | = | |
| 5. ಮಾತಿಲ್ಲ | = | + | = | |
| 6. ಗುರುವಿಗೆ | = | + | = | |
| 7. ಕಂಬನಿ | = | + | = | |
| 8. ದಿಗಂತ | = | + | = | |
| 9. ತಜ್ಞಾತಿ | = | + | = | |
| 10. ಚಿನ್ಮಯ | = | + | = | |

@KTBS NOT TO BE REPUBLISHED

## ಉ. ಕೂಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

| | | | | |
|---|---|---|---|---|
| ಮಾದರಿ : ಉತ್ + ಮಾದ | = | ಉನ್ಮಾದ | = | ಅನುನಾಸಿಕ ಸಂಧಿ |
| 1. ಸೂರ್ಯ + ಉದಯ | = | | = | |
| 2. ಮಾಡು + ಇಸು | = | | = | |
| 3. ಹುಲಿ + ಇಂದ | = | | = | |
| 4. ಮಳೆ + ಕಾಲ | = | | = | |
| 5. ವಾಕ್ + ಈಶ | = | | = | |
| 6. ಜಗತ್ + ಜನನಿ | = | | = | |
| 7. ಸತ್ + ಮಾನ | = | | = | |
| 8. ಗುರು + ಉಪದೇಶ | = | | = | |
| 9. ವನ + ಔಷಧ | = | | = | |
| 10. ಇತಿ + ಆದಿ | = | | = | |

# 15. ಅಭ್ಯಾಸ

## ಅ. ಗೆರೆ ಎಳೆದ ಪದವನ್ನು ಮಾತ್ರ ಗಮನಿಸಿ.

1. ಅಮ್ಮ ಅಂಗಡಿಗೆ ಹೊರಟರು. ಅವರು ಒಂದು ಚೀಲವನ್ನು ಹಿಡಿದಿದ್ದರು.
2. ಮುನ್ನಿ ಸುಮಾಳ ಪ್ರೀತಿಯ ಬೆಕ್ಕು. ಅದು ಅವಳಿಗೆ ಬಹಳ ಇಷ್ಟ.
3. ಸುಮಂತ ಮತ್ತು ಜೋಸೆಫ್ ಗೆಳೆಯರು. ಇವರು ಇಬ್ಬರೂ ಜೊತೆಯಾಗಿ ತಿರುಗಾಡಲು ಹೊರಟರು.
4. ರೈಲುಗಳಿಗೆ ಚಕ್ರಗಳಿರುತ್ತವೆ. ಅವು ರೈಲು ಕಂಬಿಗಳ ಮೇಲೆ ಓಡುತ್ತವೆ.
5. ಶ್ಯಾಮನಿಗೆ ಸಿನಿಮಾ ನೋಡುವ ಮನಸ್ಸಾಯಿತು. ಆಗ ಅವನು ಸಿನಿಮಾ ಮಂದಿರಕ್ಕೆ ಹೋದನು.
6. ಚಿಕ್ಕಪ್ಪ ಮಂಗಳೂರಿನಿಂದ ಬೆಂಗಳೂರಿಗೆ ಬಂದರು. ನಮ್ಮೊಡನೆ ನೀವು ಯಾವಾಗ ಮಂಗಳೂರಿಗೆ ಬರುವಿರಿ? ಎಂದು ಕೇಳಿದರು.

**ನಿಮಗಾಗಿ**
ಅವರು, ಇವರು, ಅದು, ಇದು, ಅವಳು, ಇವಳು, ಅವನು, ಇವನು, ನೀನು, ನೀವು, ನಾವು, ತಾವು, ಅವಳಿಗೆ, ಇವಳಿಗೆ, ಅವನಿಗೆ, ಇವನಿಗೆ, ಅವು, ಇವು, ಅವನನ್ನು ಇತ್ಯಾದಿ ಪದಗಳು ನಾಮಪದದ ಬದಲು ಅದೇ ಸ್ಥಾನದಲ್ಲಿದ್ದು ನಾಮಪದವನ್ನು ಸೂಚಿಸುತ್ತವೆ. ಇವುಗಳನ್ನು **"ಸರ್ವ ನಾಮಗಳು"** ಎನ್ನುವರು.

©KTBS NOT TO BE REPUBLISHED

## ಆ. ಕೆಳಗೆ ನೀಡಲಾದ ಪದಗಳಲ್ಲಿ ಸೂಕ್ತವಾದವುಗಳನ್ನು ಆರಿಸಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

ಅವರು, ತಾವು, ಅದು, ತಮ್ಮ, ನಾನು, ಅವು, ಅವರ, ನೀನು, ನೀವು, ಅವಳು, ಅವನು, ತನ್ನ, ಅವರಿಗೆ, ನಾವು, ನಿನ್ನ, ನಮ್ಮ

1. ________________ ನಿನ್ನೆ ಬಂದೆಯಾ?
2. ________________ ಹಾಡುತ್ತಿದ್ದಳು.
3. ________________ ಯಾಕೆ ಇಲ್ಲಿಗೆ ಬಂದಿತ್ತು ?
4. ________________ ಅವನಿಗಾಗಿ ________________ ಮಾತನ್ನು ಆಲಿಸಬೇಕು.

5. ________ ________ ಪಾಡಿಗೆ ಇರುತ್ತೇವೆ.

6. ________ ಬೆಂಗಳೂರಿಗೆ ಹೋಗಿದ್ದೀರೆಂದು ________ ಹೇಳಿದ.

7. ________ ಹುಲಿಗಳೋ, ಚಿರತೆಗಳೋ ಎಂಬುದು ________ ತಿಳಿಯಲಿಲ್ಲ.

8. ________ ನಿನ್ನೆ ಇಲ್ಲಿಗೆ ಬಂದೆ. ಈಗ ಹೊರಡುತ್ತೇನೆ.

9. ________ಮನಸ್ಸಿನಲ್ಲಿದ್ದುದ್ದನ್ನು ಹೇಳಿ ಹೊರಟು ಬಿಟ್ಟ.

10. ________ ಮಾತನ್ನು ನಾನಂತೂ ಕೇಳುವುದಿಲ್ಲ.

11. ನೆನ್ನೆ ನಾನು ________ ಪೇಟೆಯಲ್ಲಿ ಮಾತನಾಡಿಸಿದೆ.

12. ರಸ್ತೆಯಲ್ಲಿ ________ ವೇಗವಾಗಿ ಸ್ಕೂಟರನ್ನು ಓಡಿಸುತ್ತಿದ್ದಳು.

13. ಬೆಂಗಳೂರಿನಲ್ಲಿ ________ ಈಗಲೂ ವಾಸವಾಗಿದ್ದೀರಾ?

14. ಮಾವಿನ ಹಣ್ಣೆಂದರೆ ________ ತುಂಬಾ ಇಷ್ಟ !

15. ಅವನಿಗೆ ________ ಕಷ್ಟ ಸಾಧ್ಯವಾದ ಕೆಲಸ.

**ಇ. ಕೆಳಗಿನ ವಾಕ್ಯವೃಂದದಲ್ಲಿ ಕಾಣುವ ಸರ್ವನಾಮಗಳನ್ನು ಗುರ್ತಿಸಿ ಬರೆಯಿರಿ.**

ಷರೀಫನು ನಡೆದುಕೊಂಡು ಹೋಗುತ್ತಿದ್ದ. ದಾರಿಯಲ್ಲಿ ಅವನು ಒಂದು ನಾಯಿಯನ್ನು ಕಂಡ. ಅದು 'ಬೌ ಬೌ' ಎಂದು ಬೊಗಳಿತು. ಅದನ್ನು ಕಂಡ ಅವನಿಗೆ ಭಯವಾಯಿತು. ಇದನ್ನು ನೋಡಿ ಲಲಿತಳು ಅಲ್ಲಿಗೆ ಬಂದಳು. ಅದರ ಬೊಗಳುವಿಕೆ ಕೇಳಿ ಅವಳಿಗೂ ಹೆದರಿಕೆ ಆಯಿತು. ಇವರ ಹೆದರಿಕೆಗೆ ಮನೆಯ ಮಾಲೀಕರು ಹೊರಗೆ ಬಂದರು. ನಾಯಿಯನ್ನು ಗದರಿಸಿದರು. ಅದು ಬಾಲ ಮುದುರಿಕೊಂಡು ಸುಮ್ಮನೆ ಕುಳಿತುಕೊಂಡಿತು.

| |
|---|
| |
| |
| |
| |
| |
| |

© KTBS NOT TO BE REPUBLISHED

ಈ. ಇದರಂತೆ ಸರ್ವನಾಮಗಳನ್ನು ಬಳಸಿ ವಾಕ್ಯವೃಂದವನ್ನು ರಚಿಸಿ.

| |
|---|
| |
| |
| |
| |
| |
| |
| |
| |
| |
| |
| |
| |
| |
| |

@KTBS
NOT TO BE REPUBLISHED

ಈ ಕೆಳಗಿನ ವಾಕ್ಯಗಳನ್ನು ಪ್ರಶ್ನಾರ್ಥಕ ವಾಕ್ಯಗಳಾಗಿ ಬದಲಿಸಿ;

1) ರಮೇಶನು ತಾನೇ ಮನೆ ಕಟ್ಟಿದನು.

2) ಮಕ್ಕಳು ತಾವೇ ಶಾಲಾ ಕೆಲಸ ಮಾಡಿದರು.

3) ಅವನು ತನ್ನನ್ನು ಅಪಾಯಕ್ಕೆ ತಳ್ಳಿಕೊಂಡನು.

4) ಅವರು ತಮ್ಮನ್ನು ಬಹಳ ಹೊಗಳಿಕೊಂಡರು.

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಸಂಧಿಗಳ ಅರ್ಥವನ್ನು ಹೇಳುವೆ. | | | |
| 2 | ಸಂಸ್ಕೃತ ಸಂಧಿಗಳಾಗುವ ಪದಗಳನ್ನು ಗುರುತಿಸುವೆ. | | | |
| 3 | ವಾಕ್ಯಗಳಲ್ಲಿರುವ ಸರ್ವನಾಮಗಳನ್ನು ಗುರುತಿಸಿ ಬರೆಯುವೆ. | | | |
| 4 | ವಾಕ್ಯಗಳಲ್ಲಿರುವ ಸಂಧಿ ಪದಗಳನ್ನು ಗುರುತಿಸಿ, ಬಿಡಿಸಿ ಬರೆಯುವೆ. | | | |
| 5 | ವಾಕ್ಯವೃಂದಗಳಲ್ಲಿ ನಾಮಪದ, ಸರ್ವನಾಮಗಳನ್ನು ಬಳಸಿ ಬರೆಯುವೆ. | | | |

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |

✦✦✦

@KTBS
NOT TO BE REPUBLISHED

# 16. ಅಭ್ಯಾಸ

**ಅ. 1. ಕಥೆಯನ್ನು ಪೂರ್ಣಗೊಳಿಸಿ. ಕಥೆಗೆ ಸೂಕ್ತವಾದ ಶೀರ್ಷಿಕೆಯನ್ನು ನೀಡಿ.**

ಒಬ್ಬ ಬಡವ ___ ಕೊಡಲಿ ___ ಕಾಡು ___ ಹೊರಟ. ನದಿಯ ದಡ ___ಮರ. ಮರಹತ್ತಿ ಕೊಂಬೆ ___ ಕಡಿಯಲು ___ ಪ್ರಾರಂಭಿಸಿದ. ಕೈ ಜಾರಿ ___ ಕೊಡಲಿ ___ ಬಿತ್ತು. ತುಂಬಾ ದುಃಖವಾಯಿತು. ದೇವತೆ ಪ್ರತ್ಯಕ್ಷ ___ ಚಿನ್ನದ ಕೊಡಲಿ ___ . ಅದು ತನ್ನದಲ್ಲವೆಂದ. ಬೆಳ್ಳಿಯ ಕೊಡಲಿ ___ ಅದೂ ತನ್ನದಲ್ಲವೆಂದ. ಕಬ್ಬಿಣದ ಕಬ್ಬಿಣದ ___ ಸಂತೋಷದಿಂದ ಅದು ತನ್ನದೆಂದ. ___ ಪ್ರಾಮಾಣಿಕತೆಗೆ ___ ಸಂತೋಷವಾಯಿತು. ___ ಮತ್ತು ___ ಕೊಡಲಿಗಳನ್ನು ಕೊಟ್ಟು ಆಶೀರ್ವದಿಸಿ, ದೇವತೆ ಅದೃಶ್ಯಳಾದಳು.



**ಶೀರ್ಷಿಕೆ:**

@NCERT NOT TO BE REPUBLISHED

## ಆ. ಕಥೆ ಓದಿ, ಅರ್ಥೈಸಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

### ಕಾಡಿನಲ್ಲಿ ರಜನಿ !



ರಜನಿ ರಾತ್ರಿ ಮಲಗಿದಾಗ ನಿದ್ದೆಯಲ್ಲಿ ಒಂದು ಕನಸು ಬಿತ್ತು. ಆ ಕನಸಿನಲ್ಲಿ ಅವಳು ಮಧ್ಯರಾತ್ರಿಯಲ್ಲಿ ಕಾಡಿಗೆ ಹೋಗಿದ್ದಳು. ಸುತ್ತಲೂ ಬರೀ ಕತ್ತಲು! ಅಸ್ಪಷ್ಟ ಶಬ್ದಗಳು ಕೇಳುತ್ತಿದ್ದವು. ಕತ್ತಲಲ್ಲಿ ದಾರಿ ಕಾಣದೆ ಭಯಪಡುತ್ತ ರಾತ್ರಿ ಒಂದು ದೊಡ್ಡ ಮರದ ಕೆಳಗೆ ಮಲಗಿಬಿಟ್ಟಳು. ಬೆಳಗಾಯಿತು. ಎದ್ದು ನೋಡಿದರೆ ದಟ್ಟವಾದ ಕಾಡು, ದಾರಿ ತಪ್ಪಿದ ರಜನಿಯು ಭಯದಿಂದ ಅಳುತ್ತ ಮುಂದೆ ಸಾಗುತ್ತಿದ್ದಂತೆ ದಾರಿಯಲ್ಲಿ ಒಂದು ಪುಟ್ಟ ಮೊಲವನ್ನು ನೋಡಿದಳು. ಮೊಲವನ್ನು ನೋಡಿದ ರಜನಿಗೆ ತುಂಬಾ ಖುಷಿಯಾಯಿತು.

ಹಾಗೆಯೇ ಉಲ್ಲಾಸದಿಂದ ದಾರಿ ಹುಡುಕುತ್ತಾ ಹೊರಟ ರಜನಿಯು ಒಂದು ರೋಮಾಂಚನಕಾರಿ ದೃಶ್ಯವನ್ನು ನೋಡಿದಳು. ಗರಿಬಿಚ್ಚಿದ ನವಿಲು ನಾಟ್ಯವಾಡುವುದನ್ನು ಮರೆಯಲ್ಲಿಯೇ ನಿಂತು ನೋಡಿದಳು. ಅಷ್ಟರಲ್ಲಿ ನವಿಲು ಕಣ್ಮರೆಯಾಯಿತು. ಹಾಗೆಯೇ ಸಂತೋಷದಿಂದ ಮುಂದೆ ಸಾಗುತ್ತಿದ್ದಂತೆಯೆ ರಜನಿಯು ಒಂದು ಹುಲಿಯನ್ನು ಕಂಡಳು. ಹುಲಿಯನ್ನು ಕಂಡ ತಕ್ಷಣ ರಜನಿಯು ಹೆದರಿ ಜೋರಾಗಿ ಓಡತೊಡಗಿದಳು.

ಹುಲಿಯು ರಜನಿಯನ್ನು ಹಿಂಬಾಲಿಸಿತು. ರಜನಿಯು, 'ಅಮ್ಮಾ.. ! ಅಮ್ಮಾ... !' ಎಂದು ಕೂಗುತ್ತಾ ಓಡತೊಡಗಿದಳು.

ಅಮ್ಮಾ... ಅಮ್ಮಾ... ಎಂಬ ಕೂಗನ್ನು ಕೇಳಿ ರಜನಿಯ ತಾಯಿಯು ಅವಳನ್ನು ಎಚ್ಚರಿಸಿದರು. ಕಣ್ಣುಬಿಟ್ಟರೆ ರಜನಿ ಮನೆಯಲ್ಲಿ ಹಾಸಿಗೆ ಮೇಲೆ ಮಲಗಿದ್ದಾಳೆ. 'ಅಯ್ಯೋ ! ಇದು ಕನಸೇ' ಎಂಬ ಪಿಸುನುಡಿ.

ಅಮ್ಮ 'ಏನಾಯ್ತು?' ಎಂದರು. 'ವಿಚಿತ್ರ ಕನಸು' ಎಂದಳು. ಅಮ್ಮ ಅವಳನ್ನು ಸಮಾಧಾನಪಡಿಸಿ, ಶಾಲೆಗೆ ಸಿದ್ಧವಾಗಲು ತಿಳಿಸಿದರು.

ರಜನಿ ಶಾಲೆಗೆ ಹೋಗಿ, ತಾನು ಕಂಡ ಕನಸನ್ನು ಸ್ನೇಹಿತರಿಗೆ ಹೇಳಿ ನಗತೊಡಗಿದಳು. ಕಥೆಯನ್ನು ಕೇಳಿದ ಸ್ನೇಹಿತರು ತುಂಬಾ ಖುಷಿಪಟ್ಟರು.

@KTBS NOT TO BE REPUBLISHED

**ಪ್ರಶ್ನೆಗಳಿಗೆ ಉತ್ತರಿಸಿ.**

1. ರಜನಿ ಯಾವಾಗ ಕಾಡಿಗೆ ಹೋಗಿದ್ದಳು?

2. ರಜನಿ ಕಾಡಿನಲ್ಲಿ ಕಂಡ ಪ್ರಾಣಿಗಳು ಯಾವುವು?

3. ರಜನಿ ಕಂಡ ರೋಮಾಂಚನಕಾರಿ ದೃಶ್ಯ ಯಾವುದು?

4. ನೀವು ಕಂಡ ಕನಸು ನಿಮಗೆ ನೆನಪಿದೆಯೇ? ಹಾಗಿದ್ದರೆ ಅದರ ಸಾರಾಂಶವನ್ನು ಬರೆಯಿರಿ.

@KTBS NOT TO BE REPUBLISHED

## ಇ. ಚಿತ್ರ ನೋಡಿ ಕಥೆ ಕಟ್ಟೋಣ ಬನ್ನಿ.









@KTBS NOT TO BE REPUBLISHED

**ನಮ್ಮ ಆಶಯ :** ಮೇಲಿನ ಚಿತ್ರಗಳನ್ನು ಒಂದಾದ ಮೇಲೆ ಒಂದರಂತೆ ಹಲವು ಸಲ ಗಮನಿಸಿ ಬಣ್ಣ ತುಂಬಿರಿ. ನಂತರ ಅಲ್ಲಿನ ಸನ್ನಿವೇಶವನ್ನಾಧರಿಸಿ ಕಥೆಯನ್ನು ಬರೆಯಿರಿ.

ಈ. ನಿಮ್ಮ ಅಜ್ಜಿ/ತಾತ ನಿಮಗೆ ಹೇಳಿದ ಕಥೆಯ ಸಾರಾಂಶವನ್ನು ಬರೆಯಿರಿ.

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಕಥೆ ಕೇಳುವ ಕೌಶಲ್ಯವನ್ನು ಬೆಳೆಸಿಕೊಂಡಿರುವೆ. | | | |
| 2 | ಚಿತ್ರಗಳನ್ನು ನೋಡಿ ಸೂಕ್ತವಾದ ಕಥೆಗಳನ್ನು ರಚಿಸುವೆ. | | | |
| 3 | ಕಥೆಗಳ ಮೂಲ ಸಂದೇಶವನ್ನು ಗ್ರಹಿಸುವೆ. | | | |
| 4 | ಕಥೆ ಹೇಳುವಾಗ ಧ್ವನಿಯ ಏರಿಳಿತವನ್ನು ಗಮನಿಸಿ ಕಥೆಯ ಸ್ವಾರಸ್ಯವನ್ನು ಆಹ್ಲಾದಿಸುವೆ. | | | |

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |

✦✦✦

# 17. ಪುಲ್ಲಿಂಗ–ಸ್ತ್ರೀಲಿಂಗ ಶಬ್ದಗಳು

ಗಂಡಸು ಎಂದು ಸೂಚಿಸುವ ಶಬ್ದಗಳು 'ಪುಲ್ಲಿಂಗ,' ಹೆಂಗಸು ಎಂದು ಸೂಚಿಸುವ ಶಬ್ದಗಳು 'ಸ್ತ್ರೀಲಿಂಗ' ಎಂಬುದನ್ನು ಈ ಹಿಂದೆಯೇ ವಿವರಿಸಲಾಗಿದೆ. ಅಂತಹ ಕೆಲವು ಶಬ್ದಗಳನ್ನು ಇಲ್ಲಿ ಕಾಣಬಹುದು.

| ಪುಲ್ಲಿಂಗ | | ಸ್ತ್ರೀಲಿಂಗ | ಪುಲ್ಲಿಂಗ | | ಸ್ತ್ರೀಲಿಂಗ |
|---|---|---|---|---|---|
| ತಂದೆ | – | ತಾಯಿ | ಸೋದರ ಮಾವ | – | ಸೋದರತ್ತೆ |
| ಅಪ್ಪ | – | ಅಮ್ಮ | ಚಿಕ್ಕಪ್ಪ | – | ಚಿಕ್ಕಮ್ಮ |
| ಜನಕ | – | ಜನನಿ | ಮೈದುನ | – | ನಾದಿನಿ |
| ಪಿತ | – | ಮಾತೆ | ಅಳಿಯ | – | ಸೊಸೆ |
| ಅಜ್ಜ (ತಾತ) | – | ಅಜ್ಜಿ | ದೊಡ್ಡಪ್ಪ | – | ದೊಡ್ಡಮ್ಮ |
| ಮಾವ | – | ಅತ್ತೆ | ಅಣ್ಣ | – | ಅತ್ತಿಗೆ |
| ಮಗ | – | ಮಗಳು | ಭಾವ | – | ಅಕ್ಕ |
| ಅಣ್ಣ | – | ಅಕ್ಕ | ವರ | – | ವಧು |
| ಮೊಮ್ಮಗ | – | ಮೊಮ್ಮಗಳು | ಗೆಳೆಯ | – | ಗೆಳತಿ |
| ತಮ್ಮ | – | ತಂಗಿ | ಶಿಕ್ಷಕ | – | ಶಿಕ್ಷಕಿ |
| ಪತಿ | – | ಪತ್ನಿ | ಅಧ್ಯಕ್ಷ | – | ಅಧ್ಯಕ್ಷಿಣಿ |
| ಗಂಡ | – | ಹೆಂಡತಿ | ಸದಸ್ಯ | – | ಸದಸ್ಯೆ |
| ಸೋದರ | – | ಸೋದರಿ | ವಿದ್ವಾನ್ | – | ವಿದುಷಿ |
| ಸ್ನೇಹಿತ | – | ಸ್ನೇಹಿತೆ | ಶಿಕ್ಷಕ | – | ಶಿಕ್ಷಕಿ |
| ವೈದ್ಯ | – | ವೈದ್ಯೆ | ಡಕಾಯಿತ | – | ಡಕಾಯಿತೆ |

@KTBS NOT TO BE REPUBLISHED

| ಪುಲ್ಲಿಂಗ | | ಸ್ತ್ರೀಲಿಂಗ | ಪುಲ್ಲಿಂಗ | | ಸ್ತ್ರೀಲಿಂಗ |
|---|---|---|---|---|---|
| ಯಜಮಾನ | – | ಯಜಮಾನಿ | ಶಿಷ್ಯ | – | ಶಿಷ್ಯೆ |
| ಸೇವಕ | – | ಸೇವಕಿ | ಪಂಡಿತ | – | ಪಂಡಿತೆ |
| ನಟ | – | ನಟಿ | ತರುಣ | – | ತರುಣಿ |
| ಕಲಾವಿದ | – | ಕಲಾವಿದೆ | ಯುವಕ | – | ಯುವತಿ |
| ಲೇಖಕ | – | ಲೇಖಕಿ | ರಾಜ | – | ರಾಣಿ |
| ಬರಹಗಾರ | – | ಬರಹಗಾರ್ತಿ | ರೂಪವಂತ | – | ರೂಪವಂತೆ |
| ಕವಿ | – | ಕವಯಿತ್ರಿ | ಗುಣವಂತ | – | ಗುಣವಂತೆ |
| ಪೂಜಾರಿ | – | ಪೂಜಾರಿಣಿ | ರಾಜಕುಮಾರ | – | ರಾಜಕುಮಾರಿ |
| ಹೂವಾಡಿಗ | – | ಹೂವಾಡಗಿತ್ತಿ | ಪುತ್ರ | – | ಪುತ್ರಿ |
| ಗೌಡ | – | ಗೌಡತಿ | ಶೀಲವಂತ | – | ಶೀಲವಂತೆ |
| ಮಾಟಗಾರ | – | ಮಾಟಗಾತಿ | ಭಾಗ್ಯವಂತ | – | ಭಾಗ್ಯವಂತೆ |
| ವಿದ್ಯಾರ್ಥಿ | – | ವಿದ್ಯಾರ್ಥಿನಿ | ದೇವ | – | ದೇವಿ |

NOT TO BE REPUBLISHED @KTBS

**ನಾವು ನಮ್ಮ ಮನಸ್ಸಿನ ಭಾವಗಳನ್ನು ತುಂಬಾ ಸಂಕ್ಷೇಪವಾಗಿ ಅಂದರೆ ಒಂದೇ ಶಬ್ದದಲ್ಲಿ ಹೇಳಬಹುದು. ಅಂತಹ ಕೆಲವು ಶಬ್ದಗಳು ಇಲ್ಲಿವೆ. ಓದಿ ತಿಳಿಯೋಣ.**

1. ಎಲ್ಲ ಸ್ಥಳಗಳಲ್ಲಿ ಇರುವವನು – ಸರ್ವವ್ಯಾಪಿ
2. ಎಲ್ಲರಲ್ಲೂ ಇರುವವನು – ಸರ್ವಾಂತರ್ಯಾಮಿ
3. ಇನ್ನೊಬ್ಬರಿಗೆ ಹಿಂಸೆ ಕೊಡದವನು – ಅಹಿಂಸಕ (ಅಹಿಂಸಾವಾದಿ)
4. ಪರರ ಹಿತವನ್ನು ಬಯಸುವವನು – ಹಿತೈಷಿ
5. ಯಾವುದಕ್ಕೆ ಸೀಮೆ ಇರುವುದಿಲ್ಲವೋ ಅದು – ಅಸೀಮ
6. ಹೆಂಡತಿಯನ್ನು ಕಳೆದುಕೊಂಡವನು – ವಿಧುರ

| | | | |
|---|---|---|---|
| 7. | ಗಂಡನನ್ನು ಕಳೆದುಕೊಂಡಿರುವವಳು | – | ವಿಧವೆ |
| 8. | ಧರ್ಮದಲ್ಲಿ ನಿಷ್ಠೆ ಉಳ್ಳವಳು | – | ಧರ್ಮಿಷ್ಠೆ |
| 9. | ಶಾಸ್ತ್ರಗಳನ್ನು ಬಲ್ಲವನು | – | ಶಾಸ್ತ್ರಜ್ಞ |
| 10. | ರೋಗಿಗಳನ್ನು ಪರೀಕ್ಷಿಸಿ ಔಷಧ ನೀಡುವವನು | – | ವೈದ್ಯ |
| 11. | ಇನ್ನೊಬ್ಬರಿಗೆ ಉಪಕಾರ ಮಾಡುವವನು | – | ಪರೋಪಕಾರಿ |
| 12. | ವಸ್ತು – ಪದಾರ್ಥಗಳನ್ನು ಮಾರುವವನು | – | ವ್ಯಾಪಾರಿ |
| 13. | ವಸ್ತು– ಪದಾರ್ಥಗಳನ್ನು ಕೊಳ್ಳುವವನು | – | ಗ್ರಾಹಕ (ಗಿರಾಕಿ) |
| 14. | ನಂಬಿಸಿ ಮೋಸ ಮಾಡುವವನು | – | ನಯವಂಚಕ |
| 15. | ವಿದ್ಯೆಯನ್ನು ಸಂಪಾದಿಸುವವನು | – | ವಿದ್ಯಾರ್ಥಿ |
| 16. | ಶಿಷ್ಯರಿಗೆ ಶಿಕ್ಷಣ ನೀಡುವವನು | – | ಶಿಕ್ಷಕ |
| 17. | ಕಣ್ಣು ಕಾಣಿಸದವನು | – | ಕುರುಡ |
| 18. | ಕಿವಿ ಕೇಳಿಸದವಳು | – | ಕಿವುಡಿ |
| 19. | ಕಾಲು ಸರಿಯಾಗಿಲ್ಲದವನು | – | ಕುಂಟ |
| 20. | ಮಾತನಾಡಲು ಬಾರದವನು | – | ಮೂಕ |
| 21. | ರೋಗದಿಂದ ನರಳುವವನು | – | ರೋಗಿ |
| 22. | ಸತ್ಯವನ್ನೇ ನಂಬಿ ನಡೆಯುವವನು | – | ಸತ್ಯವಂತ |
| 23. | ಸದಾ ಕಷ್ಟಪಟ್ಟು ದುಡಿಯುವವನು | – | ಕರ್ಮಯೋಗಿ |
| 24. | ದೇವರಲ್ಲಿ ನಂಬಿಕೆ ಇಲ್ಲದವನು | – | ನಾಸ್ತಿಕ |
| 25. | ದೇವರಲ್ಲಿ ನಂಬಿಕೆ ಇರುವವನು | – | ಆಸ್ತಿಕ |

@KTBS NOT TO BE REPUBLISHED

| | | | |
|---|---|---|---|
| 26. | ಯಾವುದಕ್ಕೆ ಕೊನೆ ಇಲ್ಲವೋ ಅದು | – | ಅನಂತ |
| 27. | ಯಾವುದು ನಾಶ ಹೊಂದುವುದೋ ಅದು | – | ನಶ್ವರ |
| 28. | ಯಾವುದನ್ನು ಎಣಿಸಲು ಆಗುವುದಿಲ್ಲವೋ ಅದು | – | ಅಗಣಿತ |
| 29. | ಯಾವುದು ಕಾಣಿಸುವುದಿಲ್ಲವೋ ಅದು | – | ಅಗೋಚರ |
| 30. | ಯಾರು ತಿಳಿದವನಲ್ಲವೋ ಅವನು | – | ಅಜ್ಞಾನಿ |
| 31. | ರೋಗಿಗಳಿಗೆ ಚಿಕಿತ್ಸೆ ನೀಡುವ ಸ್ಥಳ | – | ಆಸ್ಪತ್ರೆ |
| 32. | ನೀರಿನಲ್ಲೇ ಇದ್ದು ಬದುಕುವ ಪ್ರಾಣಿ | – | ಜಲಚರ |
| 33. | ಇನ್ನೊಬ್ಬರು ಮಾಡಿದ ಉಪಕಾರವನ್ನು ಮರೆಯದವನು | – | ಕೃತಜ್ಞ |
| 34. | ಇನ್ನೊಬ್ಬರು ಮಾಡಿದ ಉಪಕಾರವನ್ನು ಮರೆತವನು | – | ಕೃತಘ್ನ |
| 35. | ಯಾವ ಯೋಗ್ಯತೆಯೂ ಇಲ್ಲದವನು | – | ಅಯೋಗ್ಯ |
| 36. | ಎಲ್ಲವನ್ನೂ ತಿಳಿದವನು | – | ಸರ್ವಜ್ಞ |
| 37. | ಮಕ್ಕಳ ಭಾಗ್ಯವನ್ನು ಪಡೆಯದವಳು | – | ಬಂಜೆ |
| 38. | ಎಲ್ಲಾ ರೀತಿಯ ಸುಖ–ಸಂಬಂಧಗಳನ್ನು ತೊರೆದವನು | – | ಸನ್ಯಾಸಿ |
| 39. | ಹೂವು ಮಾರುವವಳು | – | ಹೂವಾಡಗಿತ್ತಿ |
| 40. | ಚರ್ಮದ ಕೆಲಸ ಮಾಡುವವನು | – | ಚರ್ಮಶಿಲ್ಪಿ (ಚಮ್ಮಾರ) |
| 41. | ಮರದ ಕೆಲಸ ಮಾಡುವವನು | – | ಬಡಗಿ |
| 42. | ಮಣ್ಣಿನ ಪದಾರ್ಥಗಳನ್ನು ಮಾಡುವವನು | – | ಕುಂಬಾರ |
| 43. | ಚಿನ್ನ – ಬೆಳ್ಳಿ ಕೆಲಸ ಮಾಡುವವನು | – | ಅಕ್ಕಸಾಲಿಗ |
| 44. | ನೇತ್ರಗಳನ್ನು ದಾನ ಮಾಡುವವನು | – | ನೇತ್ರದಾನಿ |
| 45. | ಹಾವನ್ನು ಆಡಿಸುವವನು | – | ಹಾವಾಡಿಗ |

@KTBS NOT TO BE REPUBLISHED

# 18. ವಿರುದ್ಧಾರ್ಥಕ ಪದಗಳು

ಪರಸ್ಪರ ವಿರುದ್ಧವಾದ ಅರ್ಥವನ್ನು ಸೂಚಿಸುವ ಶಬ್ದಗಳಿಗೆ **"ವಿರುದ್ಧಾರ್ಥಕ ಪದಗಳು"** ಎನ್ನುತ್ತಾರೆ. ಅಂತಹ ಕೆಲವು ಪದಗಳನ್ನು ಇಲ್ಲಿ ಗಮನಿಸೋಣ.

| | | | | | |
|---|---|---|---|---|---|
| ಅಮೃತ | × | ವಿಷ | ಆದಿ | × | ಅಂತ್ಯ |
| ಅನುರಾಗ | × | ವಿರಾಗ | ಆದಾಯ | × | ಖರ್ಚು |
| ಆಸೆ | × | ನಿರಾಸೆ | ಬೆಳಕು | × | ಕತ್ತಲು |
| ಆಚಾರ | × | ಅನಾಚಾರ | ಸ್ತುತಿ | × | ನಿಂದೆ |
| ಅನುಕೂಲ | × | ಅನಾನುಕೂಲ | ಸದ್ಗುಣ | × | ದುರ್ಗುಣ |
| ಉದಯ | × | ಅಸ್ತ | ಗೌರವ | × | ಅಗೌರವ |
| ಅಚಲ | × | ಚಲ | ಪವಿತ್ರ | × | ಅಪವಿತ್ರ |
| ಸುಖ | × | ದುಃಖ | ಮಡಿ | × | ಮೈಲಿಗೆ |
| ನಗು | × | ಅಳು | ಮೇಲೆ | × | ಕೆಳಗೆ |
| ಕಷ್ಟ | × | ಸುಖ | ದೂರ | × | ಹತ್ತಿರ |
| ಜ್ಞಾನ | × | ಅಜ್ಞಾನ | ಗಿಡ್ಡ | × | ಉದ್ದ |
| ಪುಣ್ಯ | × | ಪಾಪ | ಅತ್ತ | × | ಇತ್ತ |
| ಸ್ವರ್ಗ | × | ನರಕ | ಶ್ರೀಮಂತ | × | ಬಡವ |
| ಭೂಮಿ | × | ಆಕಾಶ | ಮಿತ್ರ | × | ಶತ್ರು |
| ಹಗಲು | × | ರಾತ್ರಿ | ಬಲಿಷ್ಠ | × | ದುರ್ಬಲ |
| ಹುಣ್ಣಿಮೆ | × | ಅಮಾವಾಸ್ಯೆ | ಜಿಪುಣ | × | ಉದಾರಿ |
| ಸರಿ | × | ತಪ್ಪು | ಒಳ್ಳೆಯದು | × | ಕೆಟ್ಟದ್ದು, ಕೆಟ್ಟುದು |
| ಜಯ | × | ಅಪಜಯ | ಸುಗಂಧ | × | ದುರ್ಗಂಧ |
| ಜನನ | × | ಮರಣ | ಹಿಂಸೆ | × | ಅಹಿಂಸೆ |
| ಹುಟ್ಟು | × | ಸಾವು | ಲಾಭ | × | ನಷ್ಟ |
| | | | ಶುದ್ಧ | × | ಅಶುದ್ಧ |

@KTBS NOT TO BE REPUBLISHED

| | | | | | |
|---|---|---|---|---|---|
| ಶಾಂತಿ | × | ಅಶಾಂತಿ | ಸ್ವಾರ್ಥ | × | ನಿಸ್ವಾರ್ಥ |
| ಧರ್ಮ | × | ಅಧರ್ಮ | ರಕ್ಷಕ | × | ಭಕ್ಷಕ |
| ಕಠಿಣ | × | ಸರಳ | ನ್ಯಾಯ | × | ಅನ್ಯಾಯ |
| ಸ್ವತಂತ್ರ | × | ಪರತಂತ್ರ | ಪಕ್ಷಪಾತ | × | ನಿಷ್ಪಕ್ಷಪಾತ |
| ಪಂಡಿತ | × | ಪಾಮರ | ಸಾಧ್ಯ | × | ಅಸಾಧ್ಯ |
| ಆಯಾತ | × | ನಿರ್ಯಾತ | ಸಹನೆ | × | ಅಸಹನೆ |
| ಸಹಾಯ | × | ಅಸಹಾಯ | ಆರೋಗ್ಯ | × | ಅನಾರೋಗ್ಯ |
| ಉಪಕಾರ | × | ಅಪಕಾರ | ಯೋಗ್ಯ | × | ಅಯೋಗ್ಯ |
| ಇಹಲೋಕ | × | ಪರಲೋಕ | ಅಪರಾಧಿ | × | ನಿರಪರಾಧಿ |
| ಸುಪ್ರಸಿದ್ಧ | × | ಕುಪ್ರಸಿದ್ಧ | ನಂಬಿಕೆ | × | ಅಪನಂಬಿಕೆ |
| ವರ | × | ಶಾಪ | ಒಳಿತು | × | ಕೆಡುಕು |
| ಸಜೀವ | × | ನಿರ್ಜೀವ | ಪ್ರಾರಂಭ | × | ಮುಕ್ತಾಯ |
| ಸಜ್ಜನ | × | ದುರ್ಜನ | ನಾಗರಿಕ | × | ಅನಾಗರಿಕ |
| ಹರ್ಷ | × | ವಿಷಾದ | ಅರ್ಥ | × | ಅನರ್ಥ |
| ಸ್ಪಷ್ಟ | × | ಅಸ್ಪಷ್ಟ | ಆಸ್ತಿಕ | × | ನಾಸ್ತಿಕ |

**ಕೆಳಗಿನ ವಾಕ್ಯಗಳನ್ನು ಓದಿ ಕರ್ತೃ,ಕರ್ಮ, ಕ್ರಿಯಾ ಪದಗಳನ್ನು ವಿಂಗಡಿಸಿ ಬರೆಯಿರಿ**

1) ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಆಯೋಜಿಸಿದರು.

2) ಶಿಕ್ಷಕರು ಪಾಠವನ್ನು ಸ್ಪಷ್ಟವಾಗಿ ವಿವರಿಸಿದರು.

3) ಗಿಳಿಯು ಹಣ್ಣನ್ನು ತಿಂದಿತು.

4) ಮಕ್ಕಳು ಶಾಲೆಗೆ ಹೋದರು.

5) ರಹೀಮನು ಸಿತಾರ್ ನುಡಿಸಿದನು.

6) ಜೆನಿಫರ್ ಹಾಡು ಹೇಳಿದಳು.

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಸ್ತ್ರೀಲಿಂಗ–ಪುಲ್ಲಿಂಗ–ನಪುಂಸಕ ಲಿಂಗ ಶಬ್ಧಗಳನ್ನು ಗುರುತಿಸುವೆ. | | | |
| 2 | ವಿರುದ್ಧಾರ್ಥಕ ಶಬ್ಧಗಳನ್ನು ಗುರುತಿಸುವೆ. | | | |
| 3 | ಪದ–ಪುಂಜಗಳ ಅರ್ಥವನ್ನು ಗ್ರಹಿಸಿ ವಾಕ್ಯದಲ್ಲಿ ಬಳಸುವೆ. | | | |
| 4 | ಗಾದೆ ಮಾತುಗಳನ್ನು ಮಾತನಾಡುವಾಗ ಸೂಕ್ತವಾಗಿ ಬಳಸುವೆ. | | | |
| 5 | ಈ ಅಭ್ಯಾಸ ಪುಸ್ತಕದಿಂದ ಬರವಣಿಗೆ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವೆ. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |
|---|---|---|---|---|---|---|

✦✦✦

@KTBS
NOT TO BE REPUBLISHED

# 19. ಕಿರು ಪರೀಕ್ಷೆ–4

**1.** ಕೆಳಗಿನವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

| |
|---|
| ಅ. ನಯನ = |
| ಆ. ಭಾನು = |

**2.** ಕೆಳಗಿನ ಪದಗಳಲ್ಲಿ ಸಜಾತೀಯ/ವಿಜಾತೀಯ ಒತ್ತಕ್ಷರಗಳನ್ನು ಆರಿಸಿ ಬರೆಯಿರಿ.

(ಕನ್ನಡ, ಸುಬ್ಬಯ್ಯ, ಅಣ್ಣ, ಅರಣ್ಯ, ಅಕ್ಕ, ನೆಮ್ಮದಿ, ಜಾತ್ರೆ, ಅಯ್ಯ, ಪುಸ್ತಕ, ಪೆನ್ನು)

| |
|---|
| ಸಜಾತೀಯ : |
| ವಿಜಾತೀಯ : |

**3.** ನಿಮಗೆ ತಿಳಿದಿರುವ ಐದು ನುಡಿಗಟ್ಟುಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.

| |
|---|
| |
| |
| |
| |
| |

@KTBS
NOT TO BE REPUBLISHED

**4.** ಕೆಳಗಿನ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

ಆರೋಗ್ಯವೇ ಭಾಗ್ಯ: ______________________

ಕಾಯಕವೇ ಕೈಲಾಸ : ______________________

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |
|---|---|---|---|---|---|---|

✦✦✦

**Note :**

@KTBS
NOT TO BE REPUBLISHED